ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ತಮ್ಮ ಪ್ರಶ್ನೆಗೆ ಸಮಯ ಕೇಳಿದ್ದಾರೆ. ಉತ್ತರವನ್ನು ನಂತರ ತರಿಸಿಕೊಡುತ್ತೇನೆ.

ಶಿರಾ ಟೌನ್‌ಗೆ ಕುಡಿಯುವ ನೀರು ಸರಬರಾಜು

345 - ಶ್ರೀ ಬಿ. ಸತ್ಯನಾರಾಯಣ (ಶಿರಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ಟೌನನಲ್ಲಿ ಕುಡಿಯುವ ನೀರಿನ ಬವಣೆ ಇರೋದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಟೌನಿನಲ್ಲಿನ ನೀರಿನ ಬವಣೆಯನ್ನು ನೀಗಿಸಲು ಪಕ್ಕದ ಗುಬ್ಬಿ ತಾಲ್ಲೂಕಿನಲ್ಲಿ ಹರಿಯುವ ಹೇಮಾವತಿ ನಾಲೆಯಿಂದ ಕಳ್ಳಂಬೆಳ್ಳ ಮತ್ತು ಶಿರಾ ಕೆರೆಗಳಿಗೆ ನೀರು ಬಿಟ್ಟು ಶಾಶ್ವತವಾಗಿ ಬವಣೆ ನೀಗಿಸಲು ಕ್ರಮ ಕೈಗೊಳ್ಳುವುದರಲ್ಲಿ ಇರುವ ತೊಂದರೆಯೇನು?

ಇ) ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಪ್ರಥಮವಾಗಿ ನೀರಾವರಿ ಇಲಾಖೆಯವರನ್ನು ಸಂಪರ್ಕಿಸಿ ತಾಂತ್ರಿಕ ಸಾಧ್ಯತೆ ಬಗ್ಗೆ ಪರಿಶೀಲಿಸಿ ನಂತರ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಇ) ತಾಂತ್ರಿಕ ಸಾಧ್ಯತೆ ಅವಲಂಭಿಸಿ ಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೇ, ಶಿರಾ ನಗರ ಸುಮಾರು 35,000ಕ್ಕೂ ಹೆಚ್ಚಿನ ಸಂಖ್ಯೆ ಇರತಕ್ಕ ಪಟ್ಟಣ. ಈ ಪಟ್ಟಣದಲ್ಲಿ ಸತತವಾಗಿ ಕುಡಿಯುವ ನೀರಿಗೆ ತೊಂದರೆಯಾಗಿ ಕೇವಲ ಬೋರವೆಲಗಳ ಆಶ್ರಯದಿಂದ ವಾರಕ್ಕೆ, 8 ದಿವಸಕ್ಕೆ ಒಮ್ಮೆ ನೀರನ್ನು ಕುಡಿಯತಕ್ಕ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಈ ಹಿಂದಿನ ಸರ್ಕಾರದಲ್ಲಿ ಸಹ ನಾವು ಮನವಿ ಮಾಡಿಕೊಂಡರೂ ಸಹ ಯಾವುದೇ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಶಾಶ್ವತವಾಗಿ ಕುಡಿಯುವ ನೀರಿನ ಬವಣೆಯನ್ನು ನೀಗಿಸತಕ್ಕ ಕ್ರಮವನ್ನು ತೆಗೆದುಕೊಂಡಿಲ್ಲ. ಹೇಮಾವತಿ ಜಲಾಶಯ ಶಿರಾ ತಾಲ್ಲೂಕಿನ ಪಕ್ಕದಲ್ಲಿ ಚಾನಲ್ಲಾಗಿ ಹರಿಯುತ್ತಿದೆ. ಚೇಳೂರು ಪಕ್ಕ ಒಂದು ಕಿಲೋಮೀಟರ್ ಹತ್ತಿರದಲ್ಲೇ ಹೋಗುತ್ತಾ ಇರುವುದರಿಂದ ನಗರದ ಹತ್ತಿರದ ಕೆರೆಗೆ ನೀರನ್ನು ಹರಿಸಿ ಆ ಮೂಲಕ ಕುಡಿಯುವ ನೀರಿನ ಬವಣೆಯನ್ನು ನೀಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದ್ದೆ. ಇದರ ಬಗ್ಗೆ ನೀರಾವರಿ ಇಲಾಖೆಯವರನ್ನು ಸಂಪರ್ಕಿಸಿ ಪರಿಶೀಲಿಸುತ್ತೇನೆ ಎಂದು ಹೇಳುತ್ತಿದ್ದಾರೆ. ಇದು ನಿಖರವಾದ ಉತ್ತರ ಅಲ್ಲ. ಅತ್ಯಂತ ಆದ್ಯತೆಯನ್ನು ಕೊಟ್ಟು ಕುಡಿಯುವ ನೀರಿನ ಬವಣೆಯನ್ನು ನೀಗಿಸುವುದಕ್ಕೆ ನಮ್ಮ ಸರ್ಕಾರ ಗಮನಕೊಡಬೇಕು. ಮತ್ತು ನಿಖರವಾದ ಉತ್ತರವನ್ನು ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಹೇಮಾವತಿ ಇರಿಗೇಷನ್ ಟ್ಯಾಂಕ್ ಇದೆ. ಅದರಿಂದ ಕುಡಿಯುವ ನೀರನ ಸಲುವಾಗಿ ಈ ನೀರನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಟೆಕ್ನಿಕಲ್ ಕನಸಲ್ಟೇಷನ್ ಮಾಡಬೇಕಾಗುತ್ತದೆ. ಕನಸಲ್ಟ ಮಾಡಿದನಂತರ ಹೇಮಾವತಿಯಿಂದ ಶಿರಾ ನಗರಕ್ಕೆ ನೀರು ಒದಗಿಸುಬಹುದೇ ಎಂದು ನಾನು ನೋಡುತ್ತೇನೆ. ಸಾಧ್ಯವಾದರೆ ಫೀಸಿಬಲಿಟಿ ರಿಪೋರ್ಟ ಸಿಕ್ಕನಂತರ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದ್ದರೆ ಒದಗಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಶಿರಾ ಪಟ್ಟಣ ಶಾಶ್ವತವಾಗಿ ಕುಡಿಯುವುದಕ್ಕೆ ನೀರಿಲ್ಲದೆ ಇರತಕ್ಕ ಪ್ರದೇಶ. ಅಲ್ಲಿಗೆ ಯಾವುದೇ ಯೋಜನೆ ಹಾಕಿದರೂ ಕೂಡ ನೀರು ತರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಅಂತರ್ಜಲ ಬಹಳ ಕಡಿಮೆ ಇದೆ. ಹೇಮಾವತಿ ನೀರಿನಿಂದ ಕಳ್ಳಂಬೆಳ್ಳ ಕೆರೆಗೆ ತಂದು, ಶಿರಾ ಕೆರೆಗೆ ಬಿಟ್ಟುಕೊಂಡು ಕೊಡುವುದಕ್ಕೆ ಸಾಧ್ಯವಿಲ್ಲವೇ ಎಂಬ ಮೂಲ ಪ್ರಶ್ನೆಗೆ ತಾವು ಕನಸಲ್ಟ್ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳದ್ದೀರಿ. ಇದರಲ್ಲಿ ಒಂದು ತೊಂದರೆ ಇದೆ ಅಧ್ಯಕ್ಷರೆ. ಅದು ಕೃಷ್ಣಾ ಬೇಸಿನನಲ್ಲಿ ಬರತಕ್ಕದ್ದು, ಕಾವೇರಿ ಬೇಸಿನನಲ್ಲಿ ಹೇಮಾವತಿ ನದಿ ಇರತಕ್ಕದ್ದು. ಒಂದು ಬೇಸಿನನಿಂದ ಇನ್ನೊಂದು ಬೇಸಿನಗೆ ಕೊಡಬಾರದು ಎನ್ನತಕ್ಕ ಒಂದು ವಾದ ಇದೆ. ಆದರೆ ಮುಖ್ಯವಾಗಿ ಏನಾಗಿದೆ ಎಂದರೆ ಅದೇ ಮದ್ರಾಸಿಗೆ ಕೊಡಬೇಕಾದರೆ ಒಂದು ಬೇಸಿನನಿಂದ ಇನ್ನೊಂದು ಬೇಸಿನಗೆ ಕೊಡತಕ್ಕದ್ದಕ್ಕೆ ತಾತ್ವಿಕವಾಗಿ ಒಂದು ತೀರ್ಮಾನ ಆಗಿದೆ. ಅದಕ್ಕೆ ಕೊಡುವುದಕ್ಕಾಗುವುದಿಲ್ಲ ಎನ್ನುವ ಪ್ರಶ್ನೆ ಇಲ್ಲ. ಕನಸಲ್ಟ ಮಾಡತಕ್ಕ ಪ್ರಶ್ನೆ ಇಲ್ಲ ತಾವು ಮೂಲಭೂತವಾಗಿ ಒಂದು ಪ್ರೊಪೋಸಲ ಅನ್ನು ಇರಿಗೇಷನ್ ಡಿಪಾರ್ಟಮೆಂಟಿಗೆ ಕೊಟ್ಟು ಒಂದು ಜಲಾನಯನ ಪ್ರದೇಶದಿಂದ ಇನ್ನೊಂದು ಜಲಾನಯನ ಪ್ರದೇಶಕ್ಕೆ ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ತಾವು ಕಾವೇರಿ ಟ್ರಿಬ್ಯೂನಲನಲ್ಲಿ ಅದನ್ನು ಅಲ್ಲಿ ನಮೂದು ಮಾಡಿ ಅಲ್ಲಿ ಒಂದು ಪರ್ಮಿಷನ್ ತೆಗೆದುಕೊಂಡರೆ ಸಾಧ್ಯತೆ ಇದೆ. ಇದು ಬಹಳ ಸುಲಭವಾಗಿ ಒಂದು ರೂಪಾಯಿ ಖರ್ಚಾಗದೇ ಇರುವ ರೀತಿಯಲ್ಲಿ ನೀರು ತರುವುದಕ್ಕೆ ಸಾಧ್ಯವಿದೆ. ದಯಮಾಡಿ ಅದರ ಬಗ್ಗೆ ಸೂಕ್ತವಾಗಿ ಗಮನ ಹರಿಸಿ ಮತ್ತು ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ತಾವೇನಾದರೂ ಕೂಡ ಕಾರ್ಯಕ್ರಮವನ್ನು ಹಾಕಿದರೆ ಖಂಡಿತ ಪ್ರಯೋಜನವಾಗುತ್ತದೆ. ದಯವಿಟ್ಟು ಆ ದಿಸೆಯಲ್ಲಿ ಕೆಲಸ ಮಾಡಬೇಕು. ಕುಡಿಯುವ ನೀರನ್ನು ಕೊಡುವುದಕ್ಕೆ ಯಾವುದೇ ರೀತಿಯಾದ ತೊಂದರೆ ಇಲ್ಲ.

MR. SPEAKER : It is a piece of good advice. Please examine that proposal.

ಶ್ರೀ ವೈಜನಾಥ ಪಾಟೀಲ್: ನೀರಾವರಿ ತಜ್ಞಾಧಿಯವರನ್ನು ಕರೆಯಿಸಿ ಅದರ ಬಗ್ಗೆ ಕ್ರಮ ತೆಗೆದುಕೊಂಡು ಆಗುತ್ತದೆಯೋ ಇಲ್ಲವೋ ಪರಿಶೀಲಿಸುತ್ತೇನೆ.

ಅಧ್ಯಕ್ಷರು : ಬಸವನಗೌಡ ಪಾಟೀಲರ್ ನಿನ್ನೆಯ ಪ್ರಶ್ನೆಯನ್ನು ಕೇಳಿ. ಅವರಿಗೆ ನಿನ್ನೆ ಆರೋಗ್ಯ ಸರಿಯಿರಲಿಲ್ಲ.

ವಿಜಾಪುರ ನಗರದಲ್ಲಿ ಸಾರಿಗೆ ವ್ಯವಸ್ಥೆ

329 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿರುವ ನಗರ ಸಾರಿಗೆ ಬಸ್ಸುಗಳ ಸಂಖ್ಯೆ ಎಷ್ಟು.

ಆ) ನಗರ ಸಾರಿಗೆ ಬಸ್ಸುಗಳ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ನಗರದ 25 ಕಿ.ಮೀ. ಸಮೀಪವಿರುವ ಗ್ರಾಮೀಣ ಪ್ರದೇಶಗಳಿಗೆ ನಗರ ಸಾರಿಗೆ ಬಸ್ಸುಗಳನ್ನು ಬಿಡುವ ವ್ಯವಸ್ಥೆ ಸರ್ಕಾರ ಮಾಡುವುದೇ.

ಈ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸುವುದು?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು):

ಅ) 23 ಬಸ್ಸುಗಳು.

ಆ) ಮೇಲಿನ ಬಸ್ಸುಗಳು ಪ್ರಸಕ್ತ ಬೇಡಿಕೆಯನ್ನು ಪೂರೈಸಲು ಸಾಕಾಗುತ್ತಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

12.10 ಪಿ.ಎಂ

ಶ್ರೀ ಬಸವನಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಬಿಜಾಪುರದ ನಗರ ಸಾರಿಗೆಗೆ ಕೇವಲ 23 ಬಸ್ ಇರುವುದರ ಹಿನ್ನೆಲೆಯಲ್ಲಿ ಸುಮಾರು ಎರಡೂವರೆ ಮೂರು ಲಕ್ಷ ಜನಸಂಖ್ಯೆ ಇದ್ದಂಥ ಈ ನಗರದಲ್ಲಿ ಕನಿಷ್ಟ ಇನ್ನೂ ಹತ್ತು ಬಸ್ಸುಗಳನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ಪ್ರಮುಖವಾದಂಥದ್ದು ಗ್ರಾಮೀಣ ಪ್ರದೇಶದಲ್ಲಿ ನಗರ ಸಾರಿಗೆ ಬಸ್ಸುಗಳನ್ನು ಓಡಿಸುವಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಆದರೆ ಸನ್ಮಾನ್ಯ ಅಧ್ಯಕ್ಷರೇ ವಿಶೇಷವಾಗಿ ನಗರ ಪ್ರದೇಶದ ಸುತ್ತಮುತ್ತಲಿರುವಂಥ ಹಳ್ಳಿ ಪ್ರದೇಶಗಳಿಗೆ ಗ್ರಾಮೀಣ ಬಸ್ಸುಗಳನ್ನು ಓಡಿಸುವ ಬಗ್ಗೆ ಸರಿಯಾಗಿ ಅಲ್ಲಿಯ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಅಷ್ಟು ಒಳ್ಳೆಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಿಲ್ಲ. ಕೇವಲ ಲಾಂಗ್ ರೂಟಗೆ ಗಮನ ಹರಿಸುತ್ತಾರೆ. ದೂರ ಹೋಗುವುದರಿಂದ ಹೆಚ್ಚು ತಮಗೆ ಲಾಭ ಬರುತ್ತದೆ ಎಂಬ ಹಿನ್ನೆಲೆಯಲ್ಲಿ ಅನೇಕ ಗ್ರಾಮೀಣ ಪ್ರದೇಶದಲ್ಲಿ ಇವತ್ತು ಸಾರಿಗೆ ವ್ಯವಸ್ಥೆ ಸರಿಯಾಗಿ ಇಲ್ಲ. ದಯವಿಟ್ಟು ಸರ್ಕಾರ ನಗರ ಪ್ರದೇಶದ ಸುತ್ತಮುತ್ತ ಇರತಕ್ಕ 25 ಕಿಲೋಮೀಟರ್ ಪ್ರದೇಶದಲ್ಲಿ ನಗರ ಸಾರಿಗೆ ಬಸ್ಸುಗಳನ್ನು ಓಡಿಸಿದರೆ, ಅದರಿಂದ ಸಾರ್ವಜನಿಕರಿಗೆ ಬಹಳ ಅನುಕೂಲವಾಗುತ್ತದೆ ಎನ್ನುವ ಮನವಿಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ.

ಶ್ರೀ ಕೆ. ಎಸ್. ಬೀಳಗಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ವಿಚಾರವನ್ನು ನಾನು ಒಪ್ಪುತ್ತೇನೆ. ಈ ವರ್ಷದ ಪರಿಸ್ಥಿತಿಯಲ್ಲಿ ಗ್ರಾಮೀಣ ಜನರಿಗೆ ನಗರಗಳಿಗೆ ಈ ಪ್ರದೇಶಗಳಲ್ಲಿ ಓಡುವಷ್ಟು